## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಕೆ.ಎಂ.ರವಿ, ಅಧ್ಯಕ್ಷರು, ಕೆಚ್ಚೇನಹಳ್ಳಿ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43(ಎ) ಮತ್ತು 48(4) ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1. ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ ದಾವಣಗೆರೆ ರವರ ಪತ್ರ ಸಂಖ್ಯೆ: ಜಿಪಂದಾ:ಆ(2):ಗ್ರಾಪಂ:ಸಿಆರ್:111/2016-17, ದಿನಾಂಕ:28-01-2017.
2. ಸರ್ಕಾರದ ಇದೇ ಸಮಸಂಖ್ಯೆಯ ದಿನಾಂಕ:03-04-2017 ರ ಕಾರಣ ಕೇಳುವ ನೋಟೀಸು.
3. ಶ್ರೀ ಕೆ.ಎಂ.ರವಿ ಅಧ್ಯಕ್ಷರು, ಕೆಚ್ಚೇನಹಳ್ಳಿ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ದಿನಾಂಕ:24-04-2017 ರ ಲಿಖಿತ ಹೇಳಿಕೆ.
4. ಸರ್ಕಾರದ ಸಮಸಂಖ್ಯೆಯ ವಿಚಾರಣಾ ನೋಟೀಸ್‌ನ ದಿನಾಂಕ:13.07.2017
5. ಕಾರ್ಯನಿರ್ವಾಹಕಾಧಿಕಾರಿ ,ತಾಲ್ಲೂಕು ಪಂಚಾಯತಿ ಜಗಳೂರು ರವರ ವರದಿ ಸಂಖ್ಯೆ:ತಾಪಂಜ/ಗ್ರಾಪಂ/ಪವ/ 2017-18, ದಿನಾಂಕ:01-12-2017.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ ರವರ ಪ್ರಸ್ತಾವನೆಯಲ್ಲಿ ಜಗಳೂರ ತಾಲ್ಲೂಕು ಕೆಚ್ಚೇನಹಳ್ಳಿ ಗ್ರಾಮ ಪಂಚಾಯತಿಯಲ್ಲಿ 2015-16 ಹಾಗೂ 2016-17ನೇ ಸಾಲಿನ ಹಣಕಾಸಿನ ವ್ಯವಹಾರದ ಬಗ್ಗೆ ಆಂತರಿಕ ಲೆಕ್ಕ ತಪಾಸಣೆ ನಡೆಸಿದ ವರದಿಯಲ್ಲಿ 2015-16ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 20 ಕಾಮಗಾರಿಗಳನ್ನು ಕೈಗೊಂಡಿದ್ದು, 20 ಕಾಮಗಾರಿಗಳಿಗೆ ಒಟ್ಟು ರೂ.24,41,115/-ಗಳ ಖರ್ಚು ಭರಿಸಲಾಗಿರುತ್ತದೆ. 2016-17ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 14 ಕಾಮಗಾರಿಗಳನ್ನು ಕೈಗೊಂಡಿದ್ದು, 14 ಕಾಮಗಾರಿಗಳಿಗೆ ಒಟ್ಟು ರೂ.8,57,904/-ಗಳ ಖರ್ಚು ಭರಿಸಲಾಗಿರುತ್ತದೆ. ಖರ್ಚು ಭರಿಸಿದ ಮೊತ್ತಕ್ಕೆ ಸರಿಯಾಗಿ ಕಡತಗಳನ್ನು ನಿರ್ವಹಿಸಿರುವುದಿಲ್ಲ ಹಾಗೂ 09 ವೈಯಕ್ತಿಕ ಕಾಮಕಾರಿಗಳಿಗೆ ಒಟ್ಟು ರೂ.2,61,500/-ಗಳಿಗೆ ದಿ:07-06-2016 ರಂದು ಕಾಮಗಾರಿ ಆದೇಶ ಪಡೆದಿದ್ದರೂ ಸಹ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವಿಫಲರಾಗಿರುತ್ತಾರೆ.

2016-17ನೇ ಸಾಲಿನಲ್ಲಿ 14ನೇ ಹಣಕಾಸು ಯೋಜನೆಯಡಿ 16 ಕಾಮಗಾರಿಗಳಿಗೆ ರೂ.9,42,115/-ಗಳ ಖರ್ಚು ಭರಿಸಲಾಗಿರುತ್ತದೆ ಹಾಗೂ 2015-16ನೇ ಸಾಲಿನ ಬಿ.ಆರ್.ಜಿ.ಎಫ್. ಯೋಜನೆಯಲ್ಲಿ ಮೂರು ಕಾಮಗಾರಿಗಳಿಗೆ ರೂ.2,62,534/-ಗಳನ್ನು ಖರ್ಚು ಭರಿಸಲಾಗಿರುತ್ತದೆ ಹಾಗೂ 2016-17ನೇ ಸಾಲಿನಲ್ಲಿ 05 ಕಾಮಗಾರಿಗಳಿಗೆ ರೂ.2,04,309/-ಗಳನ್ನು ಖರ್ಚು ಭರಿಸಿದ್ದು, ಸದರಿ ಕಾಮಗಾರಿಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸದೇ ಇರುವ ಬಿಲ್ಲುಗಳಿಗೆ ಹಣ ಪಾವತಿಸಲು ಪರೋಕ್ಷವಾಗಿ ಸಹಕರಿಸಿರುವುದು ಕಂಡುಬರುತ್ತದೆ.

2014-15ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಕೆ.ಎಂ.ರವಿ ಇವರ ಪತ್ನಿಯವರಾದ ಶ್ರೀಮತಿ ರಶ್ಮಿ ಇವರಿಗೆ ಶೌಚಾಲಯ ನಿರ್ಮಿಸಿಕೊಂಡ ಬಾಬ್ತು ರೂ.12,000/-ಗಳ ಸಹಾಯಧನ ಪಡೆದಿರುತ್ತಾರೆ ಹಾಗೂ ಅವರ ತಂದೆಯಾದ ಶ್ರೀ ಕೆ. ಮರುಳಪ್ಪ ಇವರು ಸಹ ರೂ. 12,000/-ಗಳ ಸಹಾಯಧನ ಪಡೆದಿರುತ್ತಾರೆ. ಒಂದೇ ಶೌಚಾಲಯಕ್ಕೆ ಇಬ್ಬರು ಫಲಾನುಭವಿಗಳಿಗೆ ಸಹಾಯಧನ ಪಾವತಿಸಲು ಪರೋಕ್ಷವಾಗಿ ಸಹಕರಿಸಿರುವುದು ಕಂಡುಬರುತ್ತದೆ.

ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ದಾವಣಗೆರೆ ರವರ ಆಂತರಿಕ ಲೆಕ್ಕ ತಪಾಸಣೆ ವರದಿಯಲ್ಲಿನ ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಆ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ

2..

ಕೆ.ಎಂ.ರವಿ ಇವರು ಜವಾಬ್ದಾರರಾಗಿರುವುದರಿಂದ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮ 1993 ಪ್ರಕರಣ 43(ಎ) ಮತ್ತು 48(4)ರಡಿ ಕ್ರಮ ಜರುಗಿಸಲು ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ ದಾವಣಗೆರೆ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಶ್ರೀ ಕೆ.ಎಂ.ರವಿ ಅಧ್ಯಕ್ಷರು, ಕೆಚ್ಚೇನಹಳ್ಳಿ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರಿಗೆ ಕಾರಣ ಕೇಳುವ ನೋಟೀಸು ಜಾರಿ ಮಾಡಿ ಅವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಅವರ ಸಮಜಾಯಿಷಿ ಕೇಳಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರಲ್ಲಿ ಶ್ರೀ ಕೆ.ಎಂ.ರವಿ, ಅಧ್ಯಕ್ಷರು, ಕೆಚ್ಚೇನಹಳ್ಳಿ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರು ಸಲ್ಲಿಸಿರುವ ಉತ್ತರದಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು ಸಂಬಂಧಪಟ್ಟ ಕಾರ್ಯದರ್ಶಿ/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿಯುಕ್ತಿಯಾದ ಕರ್ತವ್ಯಗಳಾಗಿರುತ್ತವೆಯೇ ವಿನಃ ಸದರಿ ಕರ್ತವ್ಯಗಳಿಗೆ ಸಂಬಂಧಪಟ್ಟಂತೆ ಅಧ್ಯಕ್ಷನಾದ ನನ್ನ ಯಾವುದೇ ಜವಾಬ್ದಾರಿಗಳು ಇರುವುದಿಲ್ಲ. ನಾವುಗಳು ಕಾಮಗಾರಿ ನಂತರ ಹಣ ವರ್ಗಾವಣೆ ಕುರಿತಂತೆ ಕಂಪ್ಯೂಟರ್‌ಗೆ ಕೇವಲ ನಮಗೆ ಸರ್ಕಾರದಿಂದ ಕೊಡಲ್ಪಟ್ಟಿರುವ ಡಾಂಗಲ್‌ನ್ನು ಮಾತ್ರ ಹಾಕಿ ಸದರಿ ಕಾಮಗಾರಿಯನ್ನು ಪೂರೈಸಿದ ವ್ಯಕ್ತಿಯ ಖಾತೆಗೆ ಹಣ ಪೂರೈಸುವ ಕುರಿತಂತೆ ಕ್ರಮ ಕೈಗೊಂಡಿರುತ್ತೇವೆ. ಬಿ.ಆರ್.ಜಿ.ಎಫ್. ಯೋಜನೆಯಲ್ಲಾಗಲಿ ಅಥವಾ ಇನ್ನಾವುದೇ ಯೋಜನೆಯನ್ನಾಗಲಿ ಕಾಮಗಾರಿಗಳಿಗೆ ಭರಿಸಲಾದ ಖರ್ಚನ್ನು ಮತ್ತು ಸದರಿ ಕಾಮಗಾರಿಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಬಿಲ್ಲುಗಳನ್ನು ಅಳವಡಿಸುವ ಕರ್ತವ್ಯವು ಸಹ ಸಂಬಂಧಪಟ್ಟ ಕಾರ್ಯದರ್ಶಿ/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ನಿಹಿತಕ್ಕೆ ಒಳಪಟ್ಟ ಕರ್ತವ್ಯಗಳಾಗಿರುತ್ತವೆಯೇ ವಿನಃ ಸದರಿ ಕರ್ತವ್ಯಗಳಿಗೆ ಸಂಬಂಧಪಟ್ಟಂತೆ ಅಧ್ಯಕ್ಷನಾದ ನನ್ನ ಯಾವುದೇ ಜವಾಬ್ದಾರಿಗಳು ಇರುವುದಿಲ್ಲ. 2014-15 ನೇ ಸಾಲಿನಲ್ಲಿ ನನ್ನ ಪತ್ನಿ ಶ್ರೀಮತಿ ರಶ್ಮಿ ಹಾಗೂ ನನ್ನ ತಂದೆ ಶ್ರೀ ಮರುಳಪ್ಪ ಇವರಿಗೆ ಒಂದೇ ಶೌಚಾಲಯಕ್ಕೆ ತಲಾ ರೂ.12,000/- ಪಾವತಿಸಲು ಸಹಕರಿಸಿರುತ್ತೇನೆ ಎನ್ನುವ ಎಲ್ಲಾ ಅಂಶಗಳು ಸತ್ಯಕ್ಕೆ ದೂರವಾದ ಆರೋಪಗಳಾಗಿರುತ್ತವೆ. ಆದ ಕಾರಣ ನನ್ನ ವಿರುದ್ಧ ಯಾವುದೇ ರೀತಿಯಲ್ಲಿ ಕ್ರಮಕೈಗೊಳ್ಳಬಾರದೆಂದು ಕೋರಿರುತ್ತಾರೆ.

ಮೇಲೆ ಓದಲಾದ (4) ರನ್ವಯ ಶ್ರೀ ಕೆ.ಎಂ.ರವಿ ಅಧ್ಯಕ್ಷರು, ಕೆಚ್ಚೇನಹಳ್ಳಿ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ವಿಚಾರಣೆ ಕರೆಯಲಾಗಿ ದಿನಾಂಕ:24-07-2017 ರಂದು ಜರುಗಿದ ವಿಚಾರಣೆಯಲ್ಲಿ ಆಪಾದಿತ ಅಧ್ಯಕ್ಷರು, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೆಚ್ಚೇನಹಳ್ಳಿ ಗ್ರಾಮ ಪಂಚಾಯತಿ, ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತಿ ದಾವಣಗೆರೆ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಜಗಳೂರು ರವರು ಹಾಜರಾಗಿರುತ್ತಾರೆ. ಅಧ್ಯಕ್ಷರು ತಾವು ಒತ್ತಡದಲ್ಲಿ ಡಾಂಗಲ್ ಹಾಗೂ ಬೆರಳಚ್ಚು ನೀಡಿರುವುದಾಗಿ ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ.

ಮೇಲೆ ಓದಲಾದ (5)ರ ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯತಿ ಜಗಳೂರು ರವರ ವರದಿಯಲ್ಲಿ ಒಂದು ಮನೆಯಲ್ಲಿ (ಖಾತೆ ಸಂಖ್ಯೆ 31) ರಲ್ಲಿ ಶ್ರೀ ಮರುಳಪ್ಪ ಕೆ.ಎಂ. ಬಿನ್ ಕರಿಬಸಪ್ಪ ಹಾಗೂ ಇವರ ಕುಟುಂಬ ವಾಸವಿರುತ್ತಾರೆ. ಮತ್ತೊಂದು ಮನೆಯಲ್ಲಿ (ಖಾತೆ ಸಂಖ್ಯೆ 31/1) ಶ್ರೀ ಕೆ.ಎಂ.ರವಿ ಬಿನ್ ಮರುಳಪ್ಪ ಇವರ ಕುಟುಂಬ ವಾಸವಿರುತ್ತಾರೆ ಹಾಗೂ ಈ ಎರಡು ಮನೆಗಳಲ್ಲಿ ಪ್ರತ್ಯೇಕವಾಗಿ 02 ಶೌಚಾಲಯಗಳು ನಿರ್ಮಾಣವಾಗಿರುತ್ತವೆ ಹಾಗೂ ಶೌಚಾಲಯಗಳು ಪ್ರಸ್ತುತ ಬಳಕೆಯಲ್ಲಿರುತ್ತವೆ ಎಂದು ವರದಿ ಸಲ್ಲಿಸಿರುತ್ತಾರೆ.

ಸರ್ಕಾರವು ಈ ಪ್ರಕರಣದಲ್ಲಿ ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದಾಗ ಸದರಿಯವರು ಉದ್ದೇಶಪೂರ್ವಕವಾಗಿ ಕರ್ತವ್ಯಲೋಪ ಮಾಡದಿರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ ಇನ್ನು ಮುಂದೆ ಈ ರೀತಿ ಆಗದಂತೆ ಎಚ್ಚರಿಕೆ ನೀಡಿ, ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43(ಎ) ಮತ್ತು 48(4)ರಂತೆ ಪ್ರಾರಂಭಿಸಿರುವ ವಿಚಾರಣೆಯನ್ನು ಕೈಬಿಟ್ಟು, ಪ್ರಕರಣವನ್ನು ಮುಕ್ತಾಯಗೊಳಿಸಲು ಸರ್ಕಾರವು ನಿರ್ಧರಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 315 ಗ್ರಾಪಂಅ 2017 ಬೆಂಗಳೂರು, ದಿನಾಂಕ:09-04-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಕೆ.ಎಂ.ರವಿ ಅಧ್ಯಕ್ಷರು, ಕೆಚ್ಚೇನಹಳ್ಳಿ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ಪ್ರಕರಣದಲ್ಲಿ ಸದರಿಯವರು ಉದ್ದೇಶಪೂರ್ವಕವಾಗಿ ಕರ್ತವ್ಯಲೋಪ ಮಾಡದಿರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ ಇನ್ನು ಮುಂದೆ ಈ ರೀತಿ ಆಗದಂತೆ ಎಚ್ಚರಿಕೆ ನೀಡಿ, ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43(ಎ) ಮತ್ತು 48(4)ರಂತೆ ಪ್ರಾರಂಭಿಸಿರುವ ವಿಚಾರಣೆಯನ್ನು ಕೈಬಿಟ್ಟು, ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

9/4

**(ಮುಬಾರಕ್ ಅಹ್ಮದ್),**
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಗೆ:</u>

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ದಾವಣಗೆರೆ, ದಾವಣಗೆರೆ ಜಿಲ್ಲೆ.
2. ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ ಜಗಳೂರು, ದಾವಣಗೆರೆ ಜಿಲ್ಲೆ.
3. ಶ್ರೀ ಕೆ.ಎಂ.ರವಿ ಅಧ್ಯಕ್ಷರು, ಕೆಚ್ಚೇನಹಳ್ಳಿ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೆಚ್ಚೇನಹಳ್ಳಿ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ.
5. ಗಣಕ ಶಾಖೆ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.